ದಿನಾಂಕಃ **21-02-2019** ರಂದು ಪ್ರತಿವಾದಿಯನ್ನು ಕರೆಯಿಸಿ ಪ್ರಮಾಣ ಪಚನ ಭೋಧಿಸಲಾಯಿತು.
ಮುಖ್ಯವಿಚಾರಣೆಃ ಶ್ರೀ.ಎಂ.ಎಸ್.ಹೆಚ್ ವಕೀಲರಿಂದಃ

ಇವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅವರನ್ನು ಡಿ.ಡಬ್ಲೂ-1 ಎಂದು ಪರಿಗಣಿಸಲಾಯಿತು.

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದಿದ್ದು ಅದರಲ್ಲಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾವಾದಾಸ್ತಿಯಾದ ರಿ.ಸ.ನಂಃ 63/3 ಮತ್ತು ರಿ.ಸ.ನಂಃ 89/1 ನೇದ್ದವುಗಳಿಗೆ ಸಂಬಂಧಿಸಿದ ಕೈಬರಹದ ಉತಾರವನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿ.ಡಿ-1 ಮತ್ತು ನಿ.ಡಿ-2 ಎಂದು ಗುರುತಿಸಲಾಯಿತು. ಹರವಿ ಗ್ರಾಮದ ರಿ.ಸ.ನಂಃ 89 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನಿ.ಡಿ-3 ಎಂದು, ಎಂಟು ಪೇ ಸ್ಲಿಪ್ ಹಾಜರುಪಡಿಸಿರುತ್ತೇನೆ. ಸದರಿ ಹಾಜರುಪಡಿಸುವಿಕೆಗೆ ವಾದಿಯ ಪರ ವಕೀಲರು ತಕರಾರು ಮಾಡಿದ್ದರಿಂದ ಸದರಿ ದಾಖಲೆಗಳನ್ನು ಅವರ ತಕರಾರಿಗೊಳಪಟ್ಟು ನಿ.ಡಿ-4 ರಿಂದ ನಿ.ಡಿ-11 ಎಂದು ಗುರುತಿಸಲಾಯಿತು. ಆದ್ದರಿಂದ ವಾದಿಯು ಸಲ್ಲಿಸಿದ ದಾವೆಯನ್ನು ವಜಾ ಮಾಡಬೇಕಾಗಿ ವಿನಂತಿ ಇರುತ್ತದೆ.

ಶ್ರೀ. ಎಸ್.ವಿ.ಎಂ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಲಾಯಿತು.
(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಿಸಿದೆ).

ಓ.ಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ದಿನಾಂಕಃ 21-02-2019 ಹಾನಗಲ್.

ಸಾಕ್ಷಿದಾರರ ಸಹಿಃ